# ಕರ್ನಾಟಕ ವಿಧಾನಸಭೆ

## 141ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : (454)334

ಸದಸ್ಯರ ಹೆಸರು : ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 23-09-2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ಸಾಲಿನಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಬಿಡುಗಡೆಯಾಗಿರುವ ಅನುದಾನವೆಷ್ಟು; | 2020-21ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಡಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಡಿ ಗುಂಡಿಗಳನ್ನು ಮುಚ್ಚಲು ಹಂಚಿಕೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ) |

| ಕ್ರ.ಸಂ | ಲೆಕ್ಕಶೀರ್ಷಿಕೆ | ಯೋಜನೆ | ಹಂಚಿಕೆಯಾದ ಅನುದಾನ |
|---|---|---|---|
| 1 | 3054-03-337-0-05-200 | ರಾಜ್ಯ ಹೆದ್ದಾರಿಗಳ ನಿರ್ವಹಣೆ – ನಿರ್ವಹಣಾ ವೆಚ್ಚ | 28658.00 |
| 2 | 3054-04-337-1-10-200 | ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ- ನಿರ್ವಹಣಾ ವೆಚ್ಚ | 28104.00 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಇಲ್ಲಿಯವರೆವಿಗೂ ಎಷ್ಟು ಕಿಲೋ ಮೀಟರ್ ಗುಂಡಿಗಳನ್ನು ಮುಚ್ಚಲಾಗಿದೆ: ರಸ್ತೆ ಗುಂಡಿ ಮುಚ್ಚಲು ಕಾಲಾವಧಿಯನ್ನು ನಿಗದಿಪಡಿಸಲಾಗಿದೆಯೇ; | 2020-21ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಡಿ ಈ ಕೆಳಕಂಡಂತೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಡಿ ವಲಯವಾರು ವೆಟ್‌ಮಿಕ್ಸ್ ನಿಂದ ಮುಚ್ಚಿರುವ ಗುಂಡಿಗಳ ಕಿ.ಮೀ ವಿವರಗಳು ಈ ಕೆಳಕಂಡಂತಿದೆ. (ಕಿ.ಮೀ ಗಳಲ್ಲಿ) |

| ಕ್ರ.ಸಂ | ವಲಯ | ರಾಜ್ಯ ಹೆದ್ದಾರಿ | ಜಿಲ್ಲಾ ಮತ್ತು ಇತರೆ ರಸ್ತೆ |
|---|---|---|---|
| 1 | ದಕ್ಷಿಣ | 71.88 | 220.74 |
| 2 | ಉತ್ತರ | 150.35 | 348.54 |
| 3 | ಈಶಾನ್ಯ | 324.25 | 447.00 |
| 4 | ಕೇಂದ್ರ | 205.10 | 415.18 |

ಲೋಕೋಪಯೋಗಿ ಇಲಾಖೆಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯರಸ್ತೆಗಳಡಿ ಡಾಂಬರಿನಿಂದ ಗುಂಡಿಗಳನ್ನು ಮುಚ್ಚಲು 4 ತಿಂಗಳ ಕಾಲಾವಧಿ ನಿಗಧಿಪಡಿಸಲಾಗಿದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ನಿಗಧಿತ ಕಾಲಾವಧಿಯಲ್ಲಿ ಗುಂಡಿ ಮುಚ್ಚಲು ಸಾಧ್ಯವಾಗದಿದ್ದರೆ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಈಗಾಗಲೇ ಎಲ್ಲಾ ವಿಭಾಗಗಳಲ್ಲೂ ಅಂದಾಜು, ರಸ್ತೆವಾರು ತಯಾರಿಸಿದ್ದು, ಗುತ್ತಿಗೆ ನೇಮಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಈ ನಿಟ್ಟಿನಲ್ಲಿ ಉದಾಸೀನ / ನಿರ್ಲಕ್ಷತೆ ವಹಿಸುವ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ನೋಟೀಸ್ ಜಾರಿ ಮಾಡಿ ಇಲಾಖಾ ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂ:ಲೋಇ/601/ಐಎಫ್ಎ/2020 (ಇ-ಕಛೇರಿ)

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು